## ರಾಜ್ಯದ ರೇಷ್ಮೆ ಇಲಾಖೆಗೆ ವಿಶ್ವ ಬ್ಯಾಂಕಿನಿಂದ ಆರ್ಥಿಕ ನೆರವು

೨೪. ಶ್ರೀ ಎಲ್.ಆರ್. ಶಿವರಾಮೇಗೌಡ (ನಾಗಮಂಗಲ).—ಮಾನ್ಯ ರೇಷ್ಮೆ ಇಲಾಖೆಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದ ರೇಷ್ಮೆ ಇಲಾಖೆಯು ಯಾವ ಯಾವ ಯೋಜನೆಗಳಿಗಾಗಿ ವಿಶ್ವಬ್ಯಾಂಕಿನಿಂದ ಸಹಾಯಧನ ಪಡೆಯಲಾಗಿದೆ.

ಆ) ವಿಶ್ವ ಬ್ಯಾಂಕ್ ಹಾಗೂ ಕೇಂದ್ರ ಸರ್ಕಾರಗಳಿಂದ ಆರ್ಥಿಕ ಸಹಾಯ ಪಡೆಯಲು ರಾಜ್ಯ ಸರ್ಕಾರವು ರೂಪಿಸಿರುವ ನಿರ್ದಿಷ್ಟ ಯೋಜನೆಗಳೇನು ?

ಇ) ನಾಗಮಂಗಲ ತಾಲ್ಲೂಕಿನಲ್ಲಿ ರೇಷ್ಮೆ ಅಭಿವೃದ್ಧಿಗಾಗಿ ಸರ್ಕಾರದವರು ಕೈಗೊಂಡಿರುವ ಕಾರ್ಯಕ್ರಮಗಳೇನು ?

ಶ್ರೀ ಎಂ.ಎಸ್. ಆತ್ಮಾನಂದ (ರೇಷ್ಮೆ ಸಚಿವರು).—

ಅ) ೧. ಕರ್ನಾಟಕ ರೇಷ್ಮೆ ಅಭಿವೃದ್ಧಿ ಯೋಜನೆ (ಮೊದಲನೆ ಹಂತ).

೨. ರಾಷ್ಟ್ರೀಯ ರೇಷ್ಮೆ ಯೋಜನೆ (ಕರ್ನಾಟಕ ರೇಷ್ಮೆ ಅಭಿವೃದ್ಧಿ ಯೋಜನೆ – ಎರಡನೇ ಹಂತ).

ಆ) ರಾಷ್ಟ್ರೀಯ ರೇಷ್ಮೆ ಯೋಜನೆ (ಕರ್ನಾಟಕ ರೇಷ್ಮೆ ಅಭಿವೃದ್ಧಿ ಯೋಜನೆ–ಎರಡನೇ ಹಂತ)

ಇ) ಕರ್ನಾಟಕ ರೇಷ್ಮೆ ಯೋಜನೆ ಮೊದಲ ಹಂತದಲ್ಲಿ ಈ ಕೆಳಕಂಡ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಲಾಗಿತ್ತು.

೧, ತಾಂತ್ರಿಕ ಸೇವಾ ಕೇಂದ್ರ ಸ್ಥಾಪನೆ – ೧.

೨. ಚಾಕಿ ಸಾಕಾಣಿಕೆ ಕೇಂದ್ರಗಳ ಸ್ಥಾಪನೆ – ೯.

ರಾಷ್ಟ್ರೀಯ ರೇಷ್ಮೆ ಯೋಜನೆ (ಕರ್ನಾಟಕ ರೇಷ್ಮೆ ಅಭಿವೃದ್ಧಿ ಯೋಜನೆ (ಎರಡನೇ ಹಂತ)ಯಲ್ಲಿ ಈ ಕೆಳಗಿನ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

೧, ೪೫೦ ಹೆಕ್ಟೇರ್ ಪ್ರದೇಶದಲ್ಲಿ ಹಿಪ್ಪುನೇರಳೆ ಕಡ್ಡಿಯನ್ನು ನಾಟಿ ಮಾಡಲು ಉದ್ದೇಶಿಸಲಾಗಿದೆ.

೨. ಖುಷ್ಕಿ ಜಮೀನು ವ್ಯವಸಾಯ ಯೋಜನೆ ಯಡಿಯಲ್ಲಿ ಬಿಂದೇನಹಳ್ಳಿ ಲೋಕಪಾವನ ಜಲಾಸಯನ ಪ್ರದೇಶದ ೫೦ ಹೆಕ್ಟೇರ್ ಪ್ರದೇಶದಲ್ಲಿ ಹಿಪ್ಪುನೇರಳೆ ಮಾರಗಳನ್ನು ಬೆಳೆಸಲು ಉದ್ದೇಶಿಸಲಾಗಿದೆ.

೩. ಹಾಲಿ ಇರುವ ಒಂದು ತಾಂತ್ರಿಕ ಸೇವಾ ಕೇಂದ್ರದೊಂದಿಗೆ ಇನ್ನೊಂದು ತಾಂತ್ರಿಕ ಸೇವಾ ಕೇಂದ್ರವನ್ನು ಪ್ರಾರಂಭಿಸುವುದು.

೪. ಕೇಂದ್ರ ರೇಷ್ಮೆ ಮಂಡಳಿಯವರು ನಾಗಮಂಗಲದಲ್ಲಿ ೫೩ ರೇಷ್ಮೆ ಕೃಷಿ ಕ್ಷೇತ್ರವನ್ನು ರಾಷ್ಟ್ರೀಯ ರೇಷ್ಮೆ ಅಭಿವೃದ್ಧಿ ಯೋಜನೆಯಡಿಯಲ್ಲಿ ಸ್ಥಾಪಿಸುವುದು.

೫. ಈ ಕೆಳಗಿನ ಕಾರ್ಯಕ್ರಮಗಳಿಗೆ ವಾಣಿಜ್ಯ ಪಿ.ಎಲ್.ಡಿ. ಬ್ಯಾಂಕ್‌ಗಳ ಮೂಲಕ ರೇಷ್ಮೆ ಬೆಳೆಗಾರರಿಗೆ ಸಾಲ ಸೌಲಭ್ಯ ಒದಗಿಸುವುದು.

ಅ) ಹಿಪ್ಪುನೇರಳೆ ನಾಟಿ.

ಆ) ರೇಷ್ಮೆ ಹುಳು ಸಾಕಣೆ ಸಲಕರಣೆಗಳು.

ಇ) ರೇಷ್ಮೆ ಹುಳು ಸಾಕಣೆ ಮನೆ.

ಈ) ನೀರಾವರಿ ಬಾವಿ.